# ‘ಅಭಿನಯಕ್ಕೆ ಪಾತ್ರದ ಆಳ ಅರಿಯಬೇಕು

**ಕೀರ್ತಿ ವೆಂಕಟೇಶ್**
ಉದಯದ ‘ಕನ್ಯಾದಾನ’ದ
ಭುವನಾ



◆ **ನಟನೆಯ ಬದುಕು ಹೇಗೆ ಆರಂಭವಾಯಿತು?**

ಪಿಯುಸಿ ಮೊದಲ ವರ್ಷದಲ್ಲಿ ಇದ್ದಾಗ ಫ್ಯಾಷನ್ ಶೋ ಮಾದರಿಯ ‘ಟ್ಯಾಲೆಂಟೆಡ್’ ಸ್ಪರ್ಧೆಯಲ್ಲಿ ಭಾಗವಹಿಸಿದ್ದೆ. ಅದರಲ್ಲಿ ಮಿಸ್ ಟ್ಯಾಲೆಂಟೆಡ್ ಕಿರೀಟ ನನ್ನ ಪಾಲಿಗೆ ಬಂತು. ಶಾಲೆಗಳಲ್ಲಿ ಯಾವಾಗಾದರೂ ರೂಪಕ–ನಾಟಕಗಳನ್ನು ಆಡುತ್ತಿದ್ದೆ. ಅದು ಕಾಲೇಜಿನಲ್ಲಿಯೂ ಮುಂದುವರಿಯಿತು. ಇದನ್ನು ಹೊರತಾಗಿ ನಟನೆಯ ಅನುಭವ ನನಗೆ ಇರಲಿಲ್ಲ. ಪರಿಚಯಸ್ಥರೊಬ್ಬರು ನಟನೆಯ ಅವಕಾಶದ ಬಗ್ಗೆ ಹೇಳಿ ಆಹ್ವಾನಿಸಿದರು. ಆಡಿಷನ್ ನೀಡಿದೆ. ಝೀ ಕನ್ನಡದ ‘ಸತ್ಯ’ದಲ್ಲಿ ಒಂದು ಪುಟ್ಟ ಪಾತ್ರ ಸಿಕ್ಕಿತು. ಅದಾದ ಮೇಲೆ ‘ಕನ್ಯಾದಾನ’ ಸಿಕ್ಕಿದೆ. ಮೊದಲು ಕ್ಯಾಮೆರಾ ಹೇಗೆ ಎದುರಿಸಬೇಕು ಎನ್ನುವುದೂ ಗೊತ್ತಿರಲಿಲ್ಲ. ದಿನಗಳು ಕಳೆದಂತೆ ಸ್ವಲ್ಪ ಸ್ವಲ್ಪ ಕಲಿತೆ. ಇದರ ಜೊತೆ ಮತ್ತೊಂದು ಧಾರಾವಾಹಿ ಮತ್ತು ಒಂದು ಸಿನಿಮಾ ಮಾಡುತ್ತಿದ್ದೇನೆ. ಸದ್ಯ ಅಭಿನಯವೇ ನನ್ನ ಕೆಲಸ.

◆ **ಬಾಲ್ಯದ ನಿಮ್ಮ ಕನಸು–ಉದ್ದೇಶ ಏನಿತ್ತು?**

ನಟನೆ ಎನ್ನುವುದು ಗೊತ್ತಿರಲಿಲ್ಲ. ಸಾಮಾನ್ಯವಾಗಿ ಡಿಗ್ರಿ ಮಾಡುವುದು. ಫ್ಯಾಷನ್ ಡಿಸೈನಿಂಗ್ ಕ್ಷೇತ್ರದಲ್ಲಿ ಏನಾದರೂ ಕೆಲಸ ಮಾಡೋಣ ಎನ್ನುವ ಯೋಚನೆಯಲ್ಲಿ ಇದ್ದೆ. ಈ ಕ್ಷೇತ್ರಕ್ಕೆ ಬರಬೇಕು ಎನ್ನುವ ಕನಸು ಖಂಡಿತ ಇರಲಿಲ್ಲ. ಬಾಲ್ಯದಲ್ಲಿ ಟೀವಿಯಲ್ಲಿ ನಾನು ಬರಬೇಕು ಅಂತ ಅನ್ನಿಸಿದ್ದೂ ಇದೆ. ಆದರೆ ಎಂದೂ ಆ ಪ್ರಯತ್ನ ಮಾಡಬೇಕು ಎಂದುಕೊಂಡಿರಲಿಲ್ಲ. ಅಭಿನಯ ನನ್ನ ಹಂಬಲ ಆಗಿರಲಿಲ್ಲ. ಟ್ಯಾಲೆಂಟೆಡ್ ಶೋದಿಂದ ನಾನು ಒಂದಿಷ್ಟು ಪರಿಚಿತಳಾಗಿದ್ದೆ. ಅದೇ ಬಣ್ಣದ ಜಗತ್ತಿಗೆ ಕರೆ ತಂದಿದೆ.

◆ **ನಟನೆಯನ್ನು ಹೇಗೆ ಕಲಿಯಬೇಕು?**

ನಟನೆಯನ್ನು ಕಲಿಯಬೇಕು ಅಂದರೆ, ಸಾಕಷ್ಟು ಸಿನಿಮಾ ನೋಡಬೇಕು. ನಟಿ ಆಗುವವಳು ಸಿನಿಮಾ ಪ್ರೇಮಿ ಆಗಿರಬೇಕು. ದೊಡ್ಡ ದೊಡ್ಡ ಕಲಾವಿದರ ಅಭಿನಯವನ್ನು ನೋಡಬೇಕು. ಅವರ ಕಣ್ಣಿನ ನೋಟದಲ್ಲಿ ಅಭಿನಯದ ತತ್ವವನ್ನು ತಿಳಿಯಬೇಕು. ನಂತರ ಕನ್ನಡಿ ಮುಂದೆ ನಿಂತು ಪ್ರಯತ್ನ ಮಾಡಬೇಕು. ಕಣ್ಣಲ್ಲೇ ನಟನೆಯನ್ನು ಕಲಿಯಲು ಸಾಧ್ಯ. ಮೊದಲು ಪಾತ್ರವನ್ನು ಅನುಭವಿಸಬೇಕು. ನಟನೆಯನ್ನು ಆರಂಭಿಸಿದಾಗ ಪಾತ್ರದ ವಿವರಣೆಯನ್ನು ಚೆನ್ನಾಗಿ ಕೇಳಿಸಿಕೊಂಡು ಅರಿತುಕೊಳ್ಳಬೇಕು. ನನಗೆ ಭುವನಾ ಪಾತ್ರ ಕೊಟ್ಟಿದ್ದಾರೆ. ಅದರಲ್ಲಿ ಗರ್ಭಿಣಿ ಆಗಿದ್ದೇನೆ. ಅದು ಬಯಸಿದಂತೆ ಏನೇನು ಆಗಬೇಕೋ ಅದೆಲ್ಲ ಮಾನಸಿಕವಾಗಿ ಆಗಿದ್ದೇನೆ. ಅಂದರೆ ಪಾತ್ರದ ಆಳದಲ್ಲಿ ಇಳಿಯಬೇಕು. ಅದರ ಬಗ್ಗೆ ಗೌರವ ಇರಬೇಕು. ಕಲಿಯಬೇಕು ಎನ್ನುವವರಿಗೆ ನಾಟಕಗಳು ಕೂಡ ಸಹಕಾರಿ ಆಗುತ್ತವೆ. ಹಾಗಾಗಿ ಸಿನಿಮಾ–ನಾಟಕಗಳನ್ನು ಹೆಚ್ಚು ನೋಡಬೇಕು.

◆ **ಕನ್ಯಾದಾನದ ಭುವನಾ ಪಾತ್ರ ಏಕೆ ಮಹತ್ವದ್ದು?**

ಆಕೆ ಮನೆಯ ಬಗ್ಗೆ ತುಂಬ ಕಾಳಜಿ ಇರುವ ಹೆಣ್ಣುಮಗಳು. ಅವಳಿಗೆ ಶೈಕ್ಷಣಿಕ ಅರಿವು ಕಡಿಮೆ. ಆದರೆ ಆಕೆಗೆ ಪ್ರಾಪಂಚಿಕ ಪ್ರಜ್ಞೆ, ಕುಟುಂಬವನ್ನು ನಿರ್ವಹಣೆ ಮಾಡುವ ಬುದ್ಧಿವಂತಿಕೆ ಇದೆ. ಆ ಪಾತ್ರ ನನಗೆ ಇಷ್ಟ ಕೂಡ ಹೌದು. ಅದು ಕಥೆಯಲ್ಲಿ ತುಂಬ ಪ್ರಾಮುಖ್ಯತೆಯನ್ನು ಹೊಂದಿದೆ. ವಾಸ್ತವದಲ್ಲಿ ನನಗೆ 19 ವರ್ಷ. ಆದರೆ, ನನ್ನ ವಯಸ್ಸನ್ನು ಮೀರಿದ ಪಾತ್ರವನ್ನು ನಿರ್ವಹಿಸುತ್ತಿದ್ದೇನೆ. ದಾಂಪತ್ಯದ ಅನುಭವವೇ ಇಲ್ಲ. ಸಂಸಾರದ ಜಂಜಾಟ ಏನೆಂದು ಗೊತ್ತಿಲ್ಲ. ಆದರೆ ಅದನ್ನು ನಾನು ತೋರಿಸಬೇಕು. ಗರ್ಭಿಣಿಯಾಗಿ ಹೊಟ್ಟೆಯಲ್ಲಿ ಮಗು ಇದೆ ಎನ್ನುವ ಭಾವನೆಯನ್ನು ಪ್ರಕಟಿಸಬೇಕು. ಇದು ತುಂಬ ದೊಡ್ಡ ಸವಾಲಿನ ಕೆಲಸ ನನಗೆ. ಈ ಪಾತ್ರಕ್ಕೆ ನಾನು ತಯಾರಿ ಆಗಲು ಸಾಕಷ್ಟು ಸಿನಿಮಾಗಳನ್ನು ನೋಡಿದ್ದೇನೆ. ಅದಕ್ಕೆ ಪೂರಕವಾಗಬಲ್ಲ ಹಲವಾರು ಸನ್ನಿವೇಶಗಳನ್ನು ಮತ್ತೆ ಮತ್ತೆ ನೋಡಿ ಕಲಿತಿದ್ದೇನೆ.

◆ **ವಿದ್ಯಾರ್ಥಿನಿ ಆಗಿದ್ದ ನಿಮಗೆ ಭಿನ್ನ ಐಡೆಂಟಿಟಿ ಸಿಕ್ಕಿದೆ. ಅದನ್ನು ನೀವು ಸಮಾಜದಲ್ಲಿ ಹೇಗೆ ಕಂಡಿದ್ದೀರಿ?**

ಜನರ ಪ್ರೀತಿ ಸಿಕ್ಕಿದೆ. ಯಾರೋ ಸಿಕ್ಕಾಗ ಎರಡು ನಿಮಿಷ ಕೊಟ್ಟರೆ ನನಗೆ ಅದು ಸಾರ್ಥಕ ಕ್ಷಣ ಅನ್ನಿಸುತ್ತದೆ. ಅದಷ್ಟನ್ನೇ ಅವರು ಬಯಸುತ್ತಾರೆ. ಗೊತ್ತಿಲ್ಲದವರ ಜೊತೆ ಕುಶಲೋಪರಿಯ ವಿಚಾರ, ಫೋಟೊ ಅವರಿಗೆ ಕೊಡುವ ಸಂತೋಷ ಅಷ್ಟಿಷ್ಟಲ್ಲ. ನಾನು ಬೆಳೆಯಲು ಅವರು ಕಾರಣ. ಹೊರಗೆ ಬಂದಾಗ ನನ್ನನ್ನು ಯಾರಾದರೂ ಗಮನಿಸುತ್ತಿದ್ದಾರೋ ಎಂದು ಕಣ್ಣಾಡಿಸುತ್ತೇನೆ. ಯಾರೇ ಬಂದು ಹಾಯ್ ಹೇಳಿದರೂ ಮುಕ್ತವಾಗಿ ಮಾತನಾಡುತ್ತೇನೆ. ಸಾಕಷ್ಟು ಮಂದಿ ಅವರ ತಾಯಿ, ಅಜ್ಜಿ, ಸ್ನೇಹಿತರಿಗೆ ವಿಡಿಯೊ ಕಾಲ್ ಮಾಡಿ ನನ್ನ ಜೊತೆ ಮಾತನಾಡಿಸಿದ್ದಾರೆ. ಅದೆಲ್ಲ ಅಚ್ಚರಿಯ ಕ್ಷಣ ಮತ್ತೆ ಸಿಗುವುದಿಲ್ಲ. ಅಭಿಮಾನದ ಒಂದೊಂದು ಕ್ಷಣವೂ ಮುಖ್ಯ. ಅದನ್ನು ಕಳೆದುಕೊಳ್ಳಲು ನಾನು ಬಯಸುವುದಿಲ್ಲ. ಸಿಕ್ಕಾಗ ಅದನ್ನು ಆಸ್ವಾದಿಸುತ್ತೇನೆ. ನಮ್ಮ ಖಾಸಗಿ ಬದುಕು ನಮಗೆ ಇದ್ದೇ ಇರುತ್ತದೆ.

**■ ರಾಘವೇಂದ್ರ ಕೆ.**